**SN – 575**

**I Semester B.Com. Examination, Nov./Dec. 2014**
**(CBCS) (2014-15 and Onwards) (Fresh)**
**COMMERCE**
**1.3 : Financial Accounting**

Time : 3 Hours | Max. Marks : 70

***Instruction :*** *Answer should be written **completely** either in **English** or in **Kannada**.*

SECTION – A

1. Answer **any five** sub-questions. **Each** sub-question carries **2** marks. **(5×2=10)**
   a) What do you mean by accounting standard ?
   b) Write any two differences between single entry system and double entry system.
   c) What is recoupment of shortworking ?
   d) Give the meaning of hire purchase system.
   e) How do you close Realisation Account ?
   f) Give any two reasons for conversion of a firm into a limited company.
   g) Calculate the missing figure

| | ₹ |
|---|---|
| Capital at the beginning | 70,800 |
| Further capital introduced | 18,800 |
| Drawings | 11,200 |
| Net Loss | 5,600 |
| Closing capital | ? |

SECTION – B

Answer **any three** questions. **Each** question carries **6** marks. **(3×6=18)**

2. What are the functions of accounting ?

3. From the following information calculate total purchases and total sales :

| | ₹ |
|---|---|
| Opening Debtors | 28,000 |
| Closing Debtors | 20,000 |
| Opening Creditors | 16,000 |
| Closing Creditors | 19,000 |
| Cash received from debtors | 12,800 |
| Cash paid to creditors | 4,000 |

P.T.O.

| | |
|---|---|
| Discount earned | 400 |
| Discount allowed | 800 |
| B/R received from debtors | 5,000 |
| B/P issued to creditors | 11,600 |
| Bad debts written off | 600 |

4. Mr. Shreekanth purchased a motor bike on hire purchase system on 1-04-2010. Total cash price of motor bike was ₹ 63,920, payable ₹ 15,920 down payment and 3 installments of ₹ 16,000 each year plus interest at 5% payable at the end of the year. Depreciation is to be charged at 10% p.a. on straight line method.

   Prepare Motor Bike Account and Hire Vender Account in the books of Shreekanth.

5. Prepare Royalty analysis table from the following details :

| | | ₹ |
|---|---|---|
| i) | Minimum Rent | 75,000 p.a. |
| ii) | Royalty payable | ₹ 5 per ton of output |

iii) Shortworking of the year can be recouped on the next 2 years out of excess royalty.

iv) Output for the first five years were

| **Years** | 1 | 2 | 3 | 4 | 5 |
|---|---|---|---|---|---|
| **Output in tons** | 10000 | 12200 | 20800 | 25500 | 35500 |

6. From the following details calculate purchase consideration and show the journal entries in the books of purchasing company.

   The purchasing company has agreed to issue 8000 Equity shares of ₹ 10 each at par. 500 8% Preference shares of ₹ 100 each at 10% premium, 1000 debentures of ₹ 50 each at 10% discount and pay cash equal to 10% of total purchase consideration.

## SECTION – C

Answer **any three** questions. **Each** question carries **14** marks. **(3×14=42)**

7. Mr. Mohan Das keeps his books by single entry system. From the following data, prepare Trading and P/L A/c for the year ending 31-3-2014 together with B/S as on that date :

   Cash Book Analysis shows the follows :

| | ₹ |
|---|---|
| Interest charges | 200 |
| Personal withdrawals | 4,000 |
| Salaries | 17,000 |
| Business expenses | 15,800 |

| | | |
|---|---|---|
| Payment to creditors | 30,000 | |
| Balance at Bank on 31-3-2014 | 4,850 | |
| Cash on hand on 31-3-2014 | 150 | |
| Receipts from debtors | 50,000 | |
| Cash sales | 30,000 | |

Further details available are

| | **1-04-2013** | **31-03-2014** |
|---|---|---|
| | ₹ | ₹ |
| Stock | 18,000 | 20,440 |
| Creditors | 16,000 | 11,000 |
| Debtors | 44,000 | 60,000 |
| Furniture | 2,000 | 2,000 |
| Machinery | 30,000 | 30,000 |

Provide 5% interest on Mohan Das's capital as on 1-04-2013. Provide ₹ 3,000 for doubtful debts and 5% depreciation on all fixed assets.

8. Muthappa purchased a plant costing ₹ 1,60,000 on 1-04-2010 from Muthamma Electronics Ltd. under Hire purchase system. The terms being ₹ 40,000 down payment and balance in three equal annual installments together with interest at 20% p.a. on outstanding cash price. Depreciation is to be charged at 15% p.a. under straight line method.

   Prepare the necessary ledger accounts in the books of Muthappa under assets accrual method.

9. Siri, Giri and Yadav carrying on business in partnership sharing profits and losses in the ratio of 4 : 3 :1 respectively. On 31-03-2014 they agreed to sell their business to a limited company. Their position on that date was as follows :

| **Liabilities** | ₹ | **Assets** | ₹ |
|---|---|---|---|
| Sundry creditors | 80,000 | Freehold property | 1,80,000 |
| Loan | 40,000 | Machinery | 1,20,000 |
| Capital A/c : | | Debtors | 1,50,000 |
| Siri | 2,00,000 | Stock | 1,30,000 |
| Giri | 1,50,000 | Cash | 20,000 |
| Yadav | 1,30,000 | | |
| | **6,00,000** | | **6,00,000** |

The company took over the following assets except cash

| | ₹ | | ₹ |
|---|---|---|---|
| Freehold property | 2,20,000 | Machinery | 1,10,000 |
| Debtors | 1,40,000 | Stock | 1,20,000 |
| Goodwill | 40,000 | | |

The company also agreed to pay the creditors which were agreed at ₹ 77,000. The company paid ₹ 3,36,000 in fully paid shares of ₹ 10 each and the balance in cash. The expenses amounted to ₹ 5,000.

Prepare the necessary Ledger accounts in the books of the firm.

10. Hemanth leased an oil well from Venkat Oil Ltd. on 1-1-2010. The minimum rent was ₹ 2,00,000 and royalty was ₹ 20 per ton of crude oil raised.

The shortworkings were recoverable in the succeeding two years of such shortworkings.

The output during the first 4 years were 5500, 8000, 11250, 12500 tons. Prepare Minimum Rent A/c, Royalty A/c, Shortworking A/c and Venkat Oil Ltd's Account in the books of Hemanth.

11. a) From the following information, you are required to calculate total sales.

| | ₹ |
|---|---|
| B/R in the beginning | 7,800 |
| Debtors in the beginning | 30,800 |
| B/R encashed during the year | 20,900 |
| Cash received from customers | 70,000 |
| Bad debts written off | 2,800 |
| Return inwards | 8,700 |
| B/R dishonoured | 1,800 |
| B/R at the end of the year | 6,000 |
| Debtors at the end of the year | 25,500 |
| Cash sales as per cash book | 40,900 |

b) Calculate the cash price of an asset from the following details

| | ₹ |
|---|---|
| Down payment | 1,500 |
| I Instalment payable at the end of I year | 10,800 |
| II Instalment payable at the end of 2$^{nd}$ year | 10,350 |
| III Instalment payable at the end of 3$^{rd}$ year | 9,900 |
| IV Instalment payable at the end of 4$^{th}$ year | 9,450 |

Rate of interest = 5% p.a.

## ಕನ್ನಡ ಆವೃತ್ತಿ

### ವಿಭಾಗ – ಎ

1. ಯಾವುದಾದರೂ **5** ಉಪಪ್ರಶ್ನೆಗಳಿಗೆ ಉತ್ತರಿಸಿ. **ಪ್ರತಿ** ಉಪಪ್ರಶ್ನೆಗೆ **2** ಅಂಕಗಳು. **(5×2=10)**
   a) ಲೆಕ್ಕಶಾಸ್ತ್ರ ಪ್ರಮಾಣಕ ಎಂದರೇನು ?
   b) ಏಕ ನಮೂದು ಪದ್ಧತಿ ಮತ್ತು ದ್ವಿ ನಮೂದು ಪದ್ಧತಿಗಳಿಗಿರುವ ಯಾವುದಾದರೂ ಎರಡು ವ್ಯತ್ಯಾಸಗಳನ್ನು ಬರೆಯಿರಿ.
   c) ಹಿಂಪಡೆಯುವ ಕಡಿಮೆ ಉತ್ಪನ್ನ ಎಂದರೇನು ?
   d) ಬಾಡಿಗೆಗೆ ಕೊಂಡುಕೊಳ್ಳುವ ಪದ್ಧತಿಯ ಅರ್ಥ ವಿವರಣೆಯನ್ನು ಕೊಡಿ.
   e) ವಿಲೇವಾರಿ ಖಾತೆಯನ್ನು ಹೇಗೆ ಪೂರ್ಣಗೊಳಿಸುವಿರಿ ?
   f) ಒಂದು ಪಾಲುಗಾರಿಕೆ ಸಂಸ್ಥೆಯನ್ನು ನಿಯಮಿತ ಕಂಪನಿಯಾಗಿ ಪರಿವರ್ತಿಸುವ ಯಾವುದಾದರೂ ಎರಡು ಕಾರಣಗಳನ್ನು ತಿಳಿಸಿ.
   g) ಕಾಣೆಯಾದ ಸಂಖ್ಯೆಯನ್ನು ಕೆಳಗಿನ ವಿವರಗಳಿಂದ ಕಂಡು ಹಿಡಿಯಿರಿ.

| | ರೂ. |
|---|---|
| ಪ್ರಾರಂಭದ ಬಂಡವಾಳ | 70,800 |
| ಬಂಡವಾಳ ಸೇರ್ಪಡೆ | 18,800 |
| ಸೆಳೆತಗಳು | 11,200 |
| ನಷ್ಟ | 5,600 |
| ಅಂತಿಮ ಬಂಡವಾಳ | ? |

### ವಿಭಾಗ – ಬಿ

ಯಾವುದಾದರೂ **3** ಪ್ರಶ್ನೆಗಳಿಗೆ ಉತ್ತರಿಸಿ. **ಪ್ರತಿ** ಪ್ರಶ್ನೆಗೆ **6** ಅಂಕಗಳು. **(3×6=18)**

2. ಲೆಕ್ಕಶಾಸ್ತ್ರದ ಕಾರ್ಯ ವಿಧಾನಗಳನ್ನು ವಿವರಿಸಿ.
3. ಈ ಕೆಳಗಿನ ಮಾಹಿತಿಗಳಿಂದ ಒಟ್ಟು ಖರೀದಿ ಮತ್ತು ಒಟ್ಟು ಮಾರಾಟ ಮೊತ್ತವನ್ನು ಕಂಡು ಹಿಡಿಯಿರಿ.

| | ₹ |
|---|---|
| ಪ್ರಾರಂಭದ ಋಣಿಗಳು | 28,000 |
| ಅಂತಿಮ ಋಣಿಗಳು | 20,000 |
| ಪ್ರಾರಂಭದ ಧನಿಗಳು | 16,000 |
| ಅಂತಿಮ ಧನಿಗಳು | 19,000 |
| ಋಣಿಗಳಿಂದ ಬಂದ ನಗದು | 12,800 |
| ಧನಿಗಳಿಗೆ ಕೊಟ್ಟ ನಗದು | 4,000 |
| ಸೋಡಿ ಗಳಿಸಿದ್ದು | 400 |
| ಸೋಡಿ ಬಿಟ್ಟುಕೊಟ್ಟಿದ್ದು | 800 |
| ಗಿರಾಕಿಗಳಿಂದ ಒಪ್ಪಿಗೆ ಪಡೆದ ಹುಂಡಿ | 5,000 |
| ಕೊಡತಕ್ಕ ಹುಂಡಿಗಳ ನೀಡಿಕೆ | 11,600 |
| ಕರಡು ಸಾಲ ವಜಾ ಮಾಡಿದ್ದು | 600 |

4. ಶ್ರೀಕಾಂತ್ ಮೋಟಾರ್ ಬೈಕ್‌ನ್ನು ಬಾಡಿಗೆ ಕೊಳ್ಳುವಿಕೆ ಆಧಾರದ ಮೇಲೆ 1-04-2010 ರಂದು ಕೊಂಡುಕೊಂಡರು. ಮೋಟಾರ್ ಬೈಕ್‌ನ ನಗದು ಬೆಲೆ ರೂ. 63,920. 15,920 ರೂ.ಗಳನ್ನು ಮುಂಗಡ ಹಣವಾಗಿ ಕೊಟ್ಟು ಉಳಿದ ಹಣವನ್ನು 3 ವಾರ್ಷಿಕ ಕಂತುಗಳಲ್ಲಿ ರೂ. 16,000, ವಾರ್ಷಿಕ ಕಂತಿನಂತೆ ವರ್ಷಾಂತ್ಯದಲ್ಲಿ ಶೇಕಡ 5ರಷ್ಟು ಬಡ್ಡಿ ಜೊತೆಯಲ್ಲಿ ಕೊಡಬೇಕು. ಮೋಟಾರ್ ಬೈಕ್‌ನ ಮೇಲೆ ಶೇ. 10ರಂತೆ ವಾರ್ಷಿಕ ಸವಕಳಿ ತೆಗೆಯಬೇಕು. ಶ್ರೀಕಾಂತ್‌ರವರ ಪುಸ್ತಕದಲ್ಲಿ ಮೋಟಾರ್ ಬೈಕ್ ಖಾತೆ ಮತ್ತು ಮಾರಾಟಗಾರನ ಖಾತೆಗಳನ್ನು ತೆರೆಯಿರಿ.

5. ಈ ಕೆಳಕಂಡ ಮಾಹಿತಿಗಳಿಂದ ರಾಜಧನ ವಿಶ್ಲೇಷಣಾ ಪಟ್ಟಿಯನ್ನು ತಯಾರಿಸಿ
   i) ಕನಿಷ್ಠ ಬಾಡಿಗೆ ರೂ. 75,000 ಪ್ರತಿ ವರ್ಷ
   ii) ನೀಡಬೇಕಾದ ರಾಜಧನ ರೂ. 5 ಪ್ರತಿ ಟನ್ ಉತ್ಪಾದನೆಗೆ
   iii) ಆಯಾ ವರ್ಷದ ಕೊರತೆ ಉತ್ಪನ್ನವನ್ನು ಮುಂದಿನ ಎರಡು ವರ್ಷಗಳ ಅಧಿಕ ಉತ್ಪನ್ನದಲ್ಲಿ ಮಾತ್ರ ಹಿಂಪಡೆಯಲು ಅವಕಾಶವಿರುತ್ತದೆ.
   iv) ಮೊದಲ ಐದು ವರ್ಷಗಳ ಉತ್ಪಾದನೆ ಈ ರೀತಿ ಇದೆ.

| **ವರ್ಷಗಳು :** | 1 | 2 | 3 | 4 | 5 |
|---|---|---|---|---|---|
| **ಉತ್ಪಾದನೆ ಟನ್ನುಗಳಲ್ಲಿ :** | 10000 | 12200 | 20800 | 25500 | 35500 |

6. ಕೆಳಕಂಡ ವಿವರಗಳಿಂದ ಖರೀದಿ ಬೆಲೆಯನ್ನು ಕಂಡು ಹಿಡಿದು, ಕೊಂಡುಕೊಳ್ಳುವ ಕಂಪನಿಯ ಪುಸ್ತಕದಲ್ಲಿ ರೋಜು ದಾಖಲೆಗಳನ್ನು ತೋರಿಸಿ.

   ಖರೀದಿ ಕಂಪನಿಯು ರೂ. 10 ಬೆಲೆಯ 8000 ಸಾಮಾನ್ಯ ಶೇರುಗಳನ್ನು ಮುಖ ಬೆಲೆಯಲ್ಲಿ, 500 ಶೇ. 8 ರ ಪ್ರಥಮ ಹಕ್ಕಿ ಶೇರುಗಳನ್ನು (ಮುಖಬೆಲೆ ರೂ. 100) ಶೇ. 10 ರ ಹೆಚ್ಚುವರಿ ದರದಲ್ಲಿ, ರೂ. 50 ಮುಖಬೆಲೆಯ 1000, ಸಾಲಪತ್ರಗಳನ್ನು ಶೇ. 10 ರ ರಿಯಾಯಿತಿ ದರದಲ್ಲಿ ಮತ್ತು ಒಟ್ಟು ಖರೀದಿ ಬೆಲೆಯ ಶೇ. 10 ರಷ್ಟನ್ನು ನಗದು ರೂಪದಲ್ಲಿ ನೀಡಲು ಒಪ್ಪಿದೆ.

**ವಿಭಾಗ – ಸಿ**

ಯಾವುದಾದರೂ **3** ಪ್ರಶ್ನೆಗಳಿಗೆ ಉತ್ತರಿಸಿ. **ಪ್ರತಿ** ಪ್ರಶ್ನೆಗೆ **14** ಅಂಕಗಳು. **(3×14=42)**

7. ಶ್ರೀ ಮೋಹನ್‌ದಾಸ್ ಅವರು ತಮ್ಮ ಪುಸ್ತಕಗಳನ್ನು ಏಕ ನಮೂದು ಪ್ರಕಾರ ಇಟ್ಟಿರುತ್ತಾರೆ. ಈ ಕೆಳಗೆ ಕೊಟ್ಟಿರುವ ವಿವರಗಳಿಂದ 31-3-2014 ಕ್ಕೆ ಅಂತ್ಯವಾಗುವಂತೆ ವ್ಯಾಪಾರ ಖಾತೆ, ಲಾಭ ನಷ್ಟ ಖಾತೆಗಳನ್ನು ಅದರ ಜೊತೆಗೆ ಆಸ್ತಿ ಜವಾಬ್ದಾರಿ ಪಟ್ಟಿಯನ್ನು ತಯಾರಿಸಿ.

   ಅದರ ನಗದು ಪುಸ್ತಕವನ್ನು ಪರಿಶೀಲಿಸಿದಾಗ ಈ ಕೆಳಗಿನ ಅಂಶಗಳು ಕಂಡು ಬಂದವು

| | ₹ |
|---|---|
| ಬಡ್ಡಿ ಕೊಟ್ಟಿದ್ದು | 200 |
| ಸ್ವಂತ ಖರ್ಚು | 4,000 |
| ಸಂಬಳ | 17,000 |
| ವ್ಯಾಪಾರದ ಖರ್ಚು | 15,800 |
| ಧನಿಗಳಿಗೆ ಕೊಟ್ಟಿದ್ದು | 30,000 |
| ಬ್ಯಾಂಕಿನ ಶಿಲ್ಕು 31-3-2014 | 4,850 |
| ಕೈಯಲ್ಲಿನ ನಗದು 31-3-2014 | 150 |
| ಋಣಿಗಳಿಂದ ಬಂದಿದ್ದು | 50,000 |
| ನಗದು ಮಾರಾಟ | 30,000 |

ಇತರೆ ದೊರೆಯುವ ಮಾಹಿತಿಗಳು ಈ ರೀತಿ ಇವೆ.

| | 1-04-2013 | 31-03-2014 |
|---|---|---|
| | ₹ | ₹ |
| ದಾಸ್ತಾನು | 18,000 | 20,440 |
| ಧನಿಗಳು | 16,000 | 11,000 |
| ಋಣಿಗಳು | 44,000 | 60,000 |
| ಪೀಠೋಪಕರಣ | 2,000 | 2,000 |
| ಯಂತ್ರಗಳು | 30,000 | 30,000 |

1-04-2013 ರಂದು ಇದ್ದಂತೆ ಮೋಹನ್‌ದಾಸ್ ಅವರ ಬಂಡವಾಳದ ಮೇಲೆ ಶೇ. 5 ರಂತೆ ಬಡ್ಡಿ ತೆಗೆದಿರಿಸಿ. ಋಣಿಗಳ ಮೇಲೆ ಸಂಶಯಾಸ್ಪದ ನಿಧಿಗಾಗಿ 3,000 ರೂ.ಗಳನ್ನು ತೆಗೆದಿರಿಸಿ ಮತ್ತು ಎಲ್ಲಾ ಸ್ಥಿರಾಸ್ತಿಗಳ ಮೇಲೆ ಶೇ. 5 ರಂತೆ ಸವಕಳಿಯನ್ನು ತೆಗೆಯಿರಿ.

8. ಮುತ್ತಪ್ಪ ಎಂಬವರು ಒಂದು ಯಂತ್ರವನ್ನು ಮುತ್ತಮ್ಮ ಎಲೆಕ್ಟ್ರಾನಿಕ್ಸ್‌ರವರಿಂದ 1-04-2010ರಂದು ರೂ. 1,60,000 ಗೆ ಬಾಡಿಗೆ ಪದ್ಧತಿಯಲ್ಲಿ ಖರೀದಿಸಿದ್ದಾರೆ. ಒಪ್ಪಂದದ ಷರತ್ತುಗಳು ಕೆಳಕಂಡಂತಿವೆ. ಮುಂಗಡ ಹಣ ಪಾವತಿಸಿದ್ದು – 40,000 ರೂ., ಉಳಿದ ಹಣವನ್ನು 3 ಸಮ ವಾರ್ಷಿಕ ಕಂತುಗಳಲ್ಲಿ ವಾರ್ಷಿಕ ಶೇ. 20 ಬಡ್ಡಿ ಸಮೇತ ಪಾವತಿ ಮಾಡುವುದು. ಯಂತ್ರವನ್ನು ಮೂಲ ಬೆಲೆಯ ಮೇಲೆ ವಾರ್ಷಿಕ ಶೇ. 15ರ ದರದಲ್ಲಿ ಸವಕಳಿ ತೆಗೆಯುವುದು (S.L.M).

ಮುತ್ತಪ್ಪನವರ ಪುಸ್ತಕದಲ್ಲಿ ಅಗತ್ಯವಾದ ಹಂತ ಹಂತವಾಗಿ ಆಸ್ತಿಯನ್ನು ಹೊಂದುವ ಪದ್ಧತಿಯಲ್ಲಿ ಲೆಕ್ಕಗಳನ್ನು ಬರೆಯಿರಿ.

9. ಸಿರಿ, ಗಿರಿ ಮತ್ತು ಯಾದವ್ ಪಾಲುದಾರಿಕೆ ವ್ಯವಹಾರವನ್ನು ನಡೆಸುತ್ತಿದ್ದು , ಲಾಭವನ್ನು 4 : 3 :1 ರ ಪ್ರಮಾಣದಲ್ಲಿ ಕ್ರಮವಾಗಿ ಹಂಚಿಕೊಳ್ಳುತ್ತಿದ್ದಾರೆ. ಅವರು ತಮ್ಮ ಸಂಸ್ಥೆಯನ್ನು 31-03-2014 ರಂದು ಒಂದು ನಿಯಮಿತ ಕಂಪನಿಗೆ ಮಾರಾಟ ಮಾಡಲು ಒಪ್ಪಿದ್ದಾರೆ. ಆ ದಿನ ಅವರ ಆಸ್ತಿ ಮತ್ತು ಜವಾಬ್ದಾರಿಗಳು ಈ ಕೆಳಕಂಡಂತಿದೆ :

| **ಜವಾಬ್ದಾರಿಗಳು** | **ರೂ.** | **ಆಸ್ತಿಗಳು** | **ರೂ.** |
|---|---|---|---|
| ಇತರೆ ಧನಿಗಳು | 80,000 | ಆಸ್ತಿಗಳು | 1,80,000 |
| ಸಾಲ | 40,000 | ಯಂತ್ರೋಪಕರಣ | 1,20,000 |
| ಬಂಡವಾಳ ಖಾತೆ : | | ಋಣಿಗಳು | 1,50,000 |
| ಸಿರಿ | 2,00,000 | ದಾಸ್ತಾನು | 1,30,000 |
| ಗಿರಿ | 1,50,000 | ನಗದು | 20,000 |
| ಯಾದವ್ | 1,30,000 | | |
| | **6,00,000** | | **6,00,000** |

ಕಂಪನಿಯು ಈ ಕೆಳಗಿನ ಆಸ್ತಿಗಳನ್ನು ಕೆಳಗೆ ತೋರಿಸಿದ ಬೆಲೆಯಂತೆ ತೆಗೆದುಕೊಳ್ಳುತ್ತಿದೆ. (ನಗದನ್ನು ಬಿಟ್ಟು)

| | **ರೂ.** | | **ರೂ.** |
|---|---|---|---|
| ಆಸ್ತಿಗಳು | 2,20,000 | ಯಂತ್ರಗಳು | 1,10,000 |
| ಋಣಿಗಳು | 1,40,000 | ದಾಸ್ತಾನು | 1,20,000 |
| ಸುನಾಮ | 40,000 | | |

ಕಂಪನಿಯ ಧನಿಗಳನ್ನು ರೂ. 77,000 ಗಳಿಗೆ ತೆಗೆದುಕೊಳ್ಳಲು ಒಪ್ಪಿದೆ. ಕಂಪನಿಯು ರೂ. 3,36,000 ಗಳನ್ನು 10 ರೂ. ಮುಖಬೆಲೆಯ ಶೇರುಗಳಲ್ಲಿ ಮತ್ತು ಉಳಿದ ಬಾಕಿಯನ್ನು ನಗದು ರೂಪದಲ್ಲಿ ಕೊಡುತ್ತದೆ. ಖರ್ಚುಗಳು ರೂ. 5,000 ಆಗಿರುತ್ತದೆ.

ಪಾಲುದಾರಿಕೆ ಪುಸ್ತಕದಲ್ಲಿ ಅವಶ್ಯಕವಿರುವ ಖಾತೆಗಳನ್ನು ತೆರೆಯಿರಿ.

10. 1-1-2010 ರಂದು ಹೇಮಂತ ಎಂಬವರು ವೆಂಕಟ್ ಆಯಿಲ್ ನಿಯಮಿತ ಅವರಿಂದ ಒಂದು ಎಣ್ಣೆ ಬಾವಿಯನ್ನು ಗುತ್ತಿಗೆ ಪಡೆದಿದ್ದಾರೆ. ಕನಿಷ್ಠ ಬಾಡಿಗೆ ರೂ. 2,00,000 ಗಳು. ರಾಜಧನ ಹೊರ ತೆಗೆದ ಕಚ್ಚಾ ತೈಲದ ಪ್ರತಿ ಟನ್‌ಗೆ ರೂ. 20 ಆಗಿರುತ್ತದೆ. ರಾಜಧನ ಕೊರತೆಯನ್ನು ಕೊರತೆ ಉದ್ಭವಿಸಿದ ಎರಡು ವರ್ಷಗಳ ಒಳಗೆ ಮುರಿದುಕೊಳ್ಳುವುದು. ಮೊದಲ ನಾಲ್ಕು ವರ್ಷಗಳ ಉತ್ಪಾದನೆಯು ಕ್ರಮವಾಗಿ 5500, 8000, 11250, 12500 ಟನ್ನುಗಳಾಗಿವೆ.

ಹೇಮಂತರ ಪುಸ್ತಕದಲ್ಲಿ ಕನಿಷ್ಠ ಬಾಡಿಗೆ ಖಾತೆ, ರಾಜಧನ ಖಾತೆ, ಕೊರತೆ ಉತ್ಪನ್ನ ಖಾತೆ ಮತ್ತು ವೆಂಕಟ ಆಯಿಲ್ ನಿಯಮಿತ ಖಾತೆಗಳನ್ನು ತೆರೆಯಿರಿ.

11. a) ಈ ಕೆಳಗೆ ಕೊಟ್ಟಿರುವ ಮಾಹಿತಿಗಳಿಂದ ಒಟ್ಟು ಮಾರಾಟ ಮೊತ್ತವನ್ನು ಕಂಡು ಹಿಡಿಯಿರಿ.

| | ರೂ. |
|---|---|
| ಪ್ರಾರಂಭಿಕ ಬರಬೇಕಾದ ಹುಂಡಿಗಳು | 7,800 |
| ಪ್ರಾರಂಭಿಕ ಋಣಿಗಳು | 30,800 |
| ಬರಬೇಕಾದ ಹುಂಡಿಗಳ ನಗದು | 20,900 |
| ಗಿರಾಕಿಗಳಿಂದ ಬಂದ ನಗದು | 70,000 |
| ಕರಡು ಸಾಲ ವಜಾ ಮಾಡಿದ್ದು | 2,800 |
| ಗಿರಾಕಿಗಳಿಂದ ಬಂದ ವಾಪಸಾತಿ | 8,700 |
| ಬರಬೇಕಾದ ಹುಂಡಿಗಳು ತಿರಸ್ಕೃತವಾದದ್ದು | 1,800 |
| ಅಂತ್ಯದ ಬರಬೇಕಾದ ಹುಂಡಿಗಳು | 6,000 |
| ಅಂತ್ಯದ ಋಣಿಗಳು | 25,500 |
| ನಗದು ಪುಸ್ತಕದ ಪ್ರಕಾರ ನಗದು ಮಾರಾಟ | 40,900 |

b) ಈ ಕೆಳಗಿನ ವಿವರಗಳಿಂದ ಆಸ್ತಿಯ ನಗದು ಬೆಲೆಯನ್ನು ಕಂಡು ಹಿಡಿಯಿರಿ.

| | ರೂ. |
|---|---|
| ಮುಂಗಡ ಹಣ | 1,500 |
| 1ನೇ ಕಂತು ಮೊದಲನೆಯ ವರ್ಷದ ಅಂತ್ಯದಲ್ಲಿ ಪಾವತಿಸಬೇಕಾಗಿರುವುದು | 10,800 |
| 2ನೇ ಕಂತು ಎರಡನೆಯ ವರ್ಷದ ಅಂತ್ಯದಲ್ಲಿ ಪಾವತಿಸಬೇಕಾಗಿರುವುದು | 10,350 |
| 3ನೇ ಕಂತು ಮೂರನೆಯ ವರ್ಷದ ಅಂತ್ಯದಲ್ಲಿ ಪಾವತಿಸಬೇಕಾಗಿರುವುದು | 9,900 |
| 4ನೇ ಕಂತು ನಾಲ್ಕನೆಯ ವರ್ಷದ ಅಂತ್ಯದಲ್ಲಿ ಪಾವತಿಸಬೇಕಾಗಿರುವುದು | 9,450 |

ವಾರ್ಷಿಕ ಬಡ್ಡಿ ದರ ಶೇ. 5 ರಂತೆ.